# ಪದ್ಮಿನಿ ನಕಲಿಯೆ?

ರಮೇಶ್ ಇಂದಿರಾ ನಿರ್ದೇಶನದ ‘ಪ್ರೀಮಿಯರ್ ಪದ್ಮಿನಿ’ ಜನಮೆಚ್ಚುಗೆ ಗಳಿಸಿದೆ. ಆದರೆ, ಈ ಪದ್ಮಿನಿ ಒರಿಜಿನಲ್ ಅಲ್ಲ, ನಕಲಿ ಎನ್ನುವ ಗುಲ್ಲು ಗಾಂಧಿನಗರದಲ್ಲಿದೆ.

■ ಪದ್ಮನಾಭ ಭಟ್



‘ಪ್ರೀಮಿಯರ್ ಪದ್ಮಿನಿ ಥರ ಕಥೆ ಸಿಕ್ರೆ ಎಷ್ಟು ಸಿನಿಮಾ ಬೇಕಾದ್ರೂ ಮಾಡ್ತೀನಿ’ ಹೀಗೆಂದಿದ್ದು ಕಿರುತೆರೆ ನಿರ್ಮಾಪಕಿ, ನಟಿ ಶ್ರುತಿ ನಾಯ್ಡು. ಇತ್ತೀಚೆಗೆ ಬಿಡುಗಡೆಯಾಗಿ ಚಿತ್ರಮಂದಿರಗಳಲ್ಲಿ ಚೆನ್ನಾಗಿಯೇ ಗಳಿಕೆ ಮಾಡಿಕೊಳ್ಳುತ್ತಿರುವ, ರಮೇಶ್ ಇಂದಿರಾ ನಿರ್ದೇಶನದ ‘ಪ್ರೀಮಿಯರ್ ಪದ್ಮಿನಿ’ ಇಷ್ಟು ಉತ್ಸಾಹದಿಂದ ಮಾತನಾಡಿದ ಶ್ರುತಿ ನಾಯ್ಡು ಆ ಕಥೆಯ ‘ಮೂಲ’ದ ಕುರಿತು ಮಾತ್ರ ತುಟಿಬಿಚ್ಚಿಲ್ಲ!

‘ಸ್ಫೂರ್ತಿ’ ಅಥವಾ ‘ಪ್ರೇರಣೆ’ಗಳನ್ನು ಹಲವು ಮೂಲಗಳಿಂದ ಪಡೆದುಕೊಳ್ಳುವಲ್ಲಿ ಕನ್ನಡ ಚಿತ್ರರಂಗದ ಹಲವು ನಿರ್ದೇಶಕರು ತುಂಬಾ ಉದಾರಿಗಳು. ‘ಒಳ್ಳೆಯದು ಯಾವ ದಿಕ್ಕಿನಿಂದ ಬಂದರೂ ಮುಕ್ತವಾಗಿ ಸ್ವೀಕರಿಸಬೇಕು’ ಎಂಬ ಮಾತನ್ನು ಅವರು, ‘ಒಳ್ಳೆಯದು ಯಾವ ದಿಕ್ಕಿನಲ್ಲಿ ಕಂಡರೂ ನಕಲು ಮಾಡಬೇಕು’ ಎಂದು ಅರ್ಥೈಸಿಕೊಂಡಂತಿದೆ.

ಕನ್ನಡದ ಕೆಲವು ಚಿತ್ರನಿರ್ಮಾತೃಗಳು ಕಥೆಯ ಮೂಲವನ್ನು ಗುಟ್ಟಾಗಿಟ್ಟು ಚಿತ್ರಮಾಡುತ್ತಾರೆ. ಮೂಲ ಬಹಿರಂಗಗೊಂಡರೆ ‘ಇನ್‌ಸ್ಪಿರೇಶನ್’ ಎಂಬ ಶಬ್ದದ ಗುರಾಣಿ ಹಿಡಿದು ಪಾರಾಗುವುದೂ ಅವರಿಗೆ ಸಲೀಸು. ಆಗೀಗ ಇಂಥ ನಡೆಗಳ ಕುರಿತು ಕೇಳಿಬರುವ ಆಕ್ಷೇಪದ ಹುಲುಸೊಲ್ಲುಗಳಿಗೆಲ್ಲ ಕಿವಿಗೊಡಲಾಗದಷ್ಟು ಎತ್ತರಕ್ಕೆ ಈ ‘ಬಣ್ಣದ ಮಂದಿ’ ಏರಿಬಿಟ್ಟಿರುವುದರಿಂದ, ‘ಪ್ರೇರಣೆ’ಗೀತೆಗಳು ಮೊಳಗುತ್ತಲೇ ಇವೆ.

‘ಗಾಂಧಿನಗರದ ಮಾಮೂಲಿ ಜಾಡು’ ಬಿಟ್ಟು ಬೇರೆ ದಾರಿ ಹಿಡಿದಿದೆ ಎಂಬ ಪ್ರಶಂಸೆ ಗಿಟ್ಟಿಸಿರುವ ‘...ಪದ್ಮಿನಿ’ಯ ಓಟದ ಹಿಂದೆಯೂ ಇಂಥದ್ದೇ ಒಂದು ಪ್ರೇರಣೆ ಗೀತೆ ಇದೆ. ಸಿನಿಮಾ ಆಸಕ್ತಿಯ ಜತೆಗೆ ಕನ್ನಡ ಸಾಹಿತ್ಯ ಓದುವ ಅಭಿರುಚಿ ಇರುವವರಿಗೆ ‘ಪ್ರೀಮಿಯರ್ ಪದ್ಮಿನಿ’ಯ ಪ್ರಯಾಣದ ಆರಂಭದಲ್ಲಿಯೇ ಎತ್ತರದ ಹಂಪ್ ಹಾರಿದಂಥ ಅನುಭವವಾಗುತ್ತದೆ. ಯಾಕೆಂದರೆ ಸಿನಿಮಾ ನಾಯಕನ ಬಳಿ ಡ್ರೈವರ್ ಆಗಿ ಕೆಲಸ ಮಾಡುವ ‘ನಂಜುಂಡಿ’, ಕನ್ನಡದ ಜನಪ್ರಿಯ ಕತೆಗಾರ ವಸುಧೇಂದ್ರ ಅವರ ಪ್ರಬಂಧವೊಂದರಿಂದ ಮೈಮುರಿದು ಎದ್ದುಬಂದವನು ಎಂಬುದು ಗೊತ್ತಾಗಿಬಿಡುತ್ತದೆ. ‘ವರ್ಣಮಯ’ ಎಂಬ ಪುಸ್ತಕದಲ್ಲಿರುವ ಆ ಪ್ರಬಂಧದ ಹೆಸರೂ ‘ನಂಜುಂಡಿ’ ಎಂದೇ! ತನ್ನ ಕಾರ್ ಚಾಲಕನ ಕುರಿತಾಗಿಯೇ ಬರೆದು ಸುದೀರ್ಘ ಪ್ರಬಂಧವದು. ಸಿನಿಮಾದ ಹಲವು ಸನ್ನಿವೇಶಗಳು ಆ ಪ್ರಬಂಧವನ್ನೇ ಅಕ್ಷರಶಃ ಅನ್ನಿಸುವಷ್ಟು ಹೋಲುತ್ತವೆ.



ವಸುಧೇಂದ್ರ



ರಮೇಶ್ ಇಂದಿರಾ

ಈ ಕುರಿತು ವಸುಧೇಂದ್ರ ಅವರನ್ನು ‘ಸುಧಾ’ ಮಾತನಾಡಿಸಿದಾಗ ಅವರು, ‘ನಾನು ನಿಮ್ಮ ಪ್ರಬಂಧವನ್ನು ಸಿನಿಮಾ ಮಾಡ್ತೇನೆ’ ಎಂದು ಕೇಳಿಕೊಂಡು ಹಿಂದೊಮ್ಮೆ ರಮೇಶ್ ಇಂದಿರಾ ಭೇಟಿಯಾಗಿದ್ದನ್ನು ನೆನಪಿಸಿಕೊಂಡರು. ಆ ಮಾತುಕತೆಯಲ್ಲಿ ಕಥೆಗೆ ಸಂಭಾವನೆಯೂ ನಿಗದಿಯಾಗಿತ್ತಂತೆ. ಆದರೆ ಮತ್ತೆ ಆ ಕುರಿತು ಮಾತುಕತೆ ಮುಂದುವರಿಯಲೇ ಇಲ್ಲ.

“ಸಿನಿಮಾ ಮಾಡುವುದು ಬೇಡ ಅಂತ ನಿರ್ಧರಿಸಿರಬೇಕು ಎಂದು ನಾನೂ ಸುಮ್ಮನಾದೆ. ಆದರೆ ಪ್ರೀಮಿಯರ್ ಪದ್ಮಿನಿ ಬಿಡುಗಡೆಗೂ ಕೆಲವು ದಿನಗಳ ಮುಂಚೆ ನನಗೆ ಕರೆ ಮಾಡಿದರು. ‘ಸಿನಿಮಾ ಮಾಡಿಬಿಟ್ಟಿದ್ದೇನೆ. ನಿಮ್ಮ ಪ್ರಬಂಧವೇ ನನಗೆ ಸ್ಫೂರ್ತಿ. ಕೃತಜ್ಞತೆಗಳು ಅಂತ ನಿಮ್ಮ ಹೆಸರು ಹಾಕಬಹುದೇ?’ ಎಂದು ಕೇಳಿದರು. ಸ್ಫೂರ್ತಿ ಯಾರು ಎಲ್ಲಿಂದಲಾದರೂ ಪಡೆದುಕೊಳ್ಳಬಹುದು. ಅದಕ್ಕೆ ನನ್ನ ಹೆಸರು ಹಾಕಬೇಕಿಲ್ಲ. ಆದರೆ ನಕಲು ಮಾಡಬಾರದಷ್ಟೆ’ ಎಂದು ಹೇಳಿದ್ದೆ. ಸಿನಿಮಾ ಬಿಡುಗಡೆಯಾದ ಮೇಲೆ ಹೋಗಿ ನೋಡಿದರೆ ಹಲವು ದೃಶ್ಯಗಳು ನನ್ನ ಪ್ರಬಂಧದಿಂದ ನೇರವಾಗಿ ನಕಲು ಮಾಡಿದ್ದಾರೆ” ಎಂದು ವಸುಧೇಂದ್ರ ಬೇಸರದಿಂದ ಹೇಳಿದರು.

‘ಇದು ಬರೀ ಹಣದ ಪ್ರಶ್ನೆ ಅಲ್ಲ. ನೈತಿಕತೆಯ ಪ್ರಶ್ನೆ. ಸಿನಿಮಾದವರಿಗೆ ಕಥೆಗಾರರ ಬಗ್ಗೆ ಎಷ್ಟು ಅವಜ್ಞೆ ಇದೆ ಎನ್ನುವುದನ್ನು ಈ ಘಟನೆ ತೋರಿಸುತ್ತದೆ. ಈ ನಿರ್ಲಕ್ಷ್ಯದಿಂದಲೇ ನನಗೆ ನೋವಾಗಿದೆ’ ಎಂದು ಸಿಟ್ಟಿನಿಂದಲೇ ಹೇಳುತ್ತಾರೆ ವಸುಧೇಂದ್ರ.

ಕನ್ನಡ ಚಿತ್ರರಂಗದಲ್ಲಿ ಬರವಣಿಗೆಯನ್ನೇ ನೆಚ್ಚಿಕೊಂಡ ಹಲವರಿದ್ದಾರೆ. ಸಿನಿಮಾ ಮಾಧ್ಯಮದಲ್ಲಿ ಕಥೆಗೆ ಬಹುಮುಖ್ಯ ಸ್ಥಾನವಿದೆ. ಅದನ್ನೆಲ್ಲ ಮರೆತು ಒಂದಿಷ್ಟು ‘ಉಳಿಸಿ’ಕೊಳ್ಳಲಿಕ್ಕೋಸ್ಕರ ಚಿತ್ರರಂಗದ ಮೇಲೆ ಬರಹಗಾರರಿಗೆ ಇದ್ದ ನಂಬಿಕೆಯನ್ನು ಕಳೆಯುವ ಕೆಲಸವನ್ನು ಯಾರು ಮಾಡಿದರೂ ಖಂಡನಾರ್ಹ. ಕಥೆಗಾರರ ಒಪ್ಪಿಗೆ ಪಡೆದು ಕಥೆಯ ಕ್ರೆಡಿಟ್ ಕೊಟ್ಟಿದ್ದರೆ ಅವರು ಕಳೆದುಕೊಳ್ಳುವಂಥದ್ದು ಏನೂ ಇರಲಿಲ್ಲ. ಬದಲಿಗೆ ಸಾಹಿತ್ಯಕೃತಿಯನ್ನು ಬೆಳ್ಳಿತೆರೆಗೆ ಅಳವಡಿಸಿದ ಗೌರವ ಅವರದಾಗಿರುತ್ತಿತ್ತು.

ತೆರೆಯ ಮೇಲೆ ತೋರಿಸಲು ಆಕರ್ಷಕವಾಗಿ ಕಾಣುವ ಮೌಲ್ಯಗಳು ಬದುಕಿನಲ್ಲಿಯೂ ಮುಖ್ಯ ಎಂದು ನಿರ್ಮಾಪಕ–ನಿರ್ದೇಶಕರಿಗೆ ಅನ್ನಿಸಬೇಕು. ಆದರೆ, ತೆರೆಯ ಮೇಲಿನ ಆದರ್ಶಗಳು ಹಣ ಗಳಿಸಿಕೊಡುತ್ತವೆ, ಬದುಕಿನಲ್ಲಿಯ ಆದರ್ಶಗಳು ಹಣ ಕಳೆಯುತ್ತವೆ. ಹಾಗಾಗಿಯೇ ಈ ಕೃತಿಚೌರ್ಯ. ಎಷ್ಟೆಂದರೂ ಸಿನಿಮಾ ‘ಕಮರ್ಷಿಯಲ್’ ಅಲ್ಲವೇ? ■